# ನೇಮಕಾತಿ ಅಧಿಸೂಚನೆ

ಶ್ರೀ ಬಸವೇಶ್ವರ ಅರ್ಬನ ಕೋ-ಆಪ್ ಬ್ಯಾಂಕ್ ಲಿ. ರಾಣೇಬೆನ್ನೂರು ಇದರಲ್ಲಿ ಖಾಲಿ ಇರುವ 4 ಕಿರಿಯ ಸಹಾಯಕ ಸಹಾಯಕರು ಮತ್ತು 2 ಜನ ಅಟೆಂಡರ್ / ಜವಾನ ಹುದ್ದೆಗಳನ್ನು ಲಿಖಿತ ಪರೀಕ್ಷೆ ಹಾಗೂ ಸಂದರ್ಶನ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಬ್ಯಾಂಕಿನಿಂದ ಸಿದ್ದಪಡಿಸಲಾದ ಅರ್ಜಿಯನ್ನು ನಿಗದಿತ ಶುಲ್ಕ ರೂ.1000+18% ಜಿಎಸ್‌ಟಿ ಸೇರಿ ಒಟ್ಟು ರೂ.1180-00 ( ಒಂದು ಸಾವಿರದಾ ಒಂದನೂರಾ ಎಂಬತ್ತು ಮಾತ್ರ ) ಪಾವತಿಸಿ ಪಡೆಯಬೇಕು. ಸದರಿ ಅರ್ಜಿಯಲ್ಲಿ ಕೇಳಲಾದ ಎಲ್ಲಾ ವಿವರಗಳನ್ನು ಭರ್ತಿ ಮಾಡಿ ದೃಢೀಕೃತ ದಾಖಲೆಗಳೊಂದಿಗೆ ಅಂಚೆಯ ಮೂಲಕ ಬ್ಯಾಂಕಿನ ಕಛೇರಿಗೆ ಸಲ್ಲಿಸತಕ್ಕದ್ದು.

ನಮ್ಮ ಬ್ಯಾಂಕಿನಲ್ಲಿ ಖಾಲಿ ಇರುವ ಈ ಕೆಳಗಿನ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

| **ಹುದ್ದೆಯ ಪದನಾಮ** | **ಒಟ್ಟು ಹುದ್ದೆಗಳ ಸಂಖ್ಯೆ** | **ವಿದ್ಯಾರ್ಹತೆ** | **ವೇತನ ಶ್ರೇಣಿ** |
|---|---|---|---|
| ಕಿರಿಯ ಸಹಾಯಕ / ಜ್ಯೂನಿಯರ್ ಅಸಿಸ್ಟಂಟ್ | 4 | ಯಾವುದೇ ಅಂಗಿಕೃತ ವಿಶ್ವವಿದ್ಯಾಲಯದಿಂದ ಈ ಕೆಳಗಿನ ಯಾವುದೇ ಪದವಿಯನ್ನು ಹೊಂದಿರಬೇಕು.<br><br>ಬಿ.ಕಾಂ./ ಬಿ.ಬಿ.ಎ./ಬಿ.ಬಿ.ಎಂ./ಬಿ.ಇ./ಬಿ.ಸಿ.ಎ/ ಬಿ.ಎಸ್.ಸಿ/ಬಿ.ಎ./<br><br>ಬಿ.ಎಸ್.ಸಿ. – ಗಣಿತ ಅಥವಾ ಸಂಖ್ಯಾಶಾಸ್ತ್ರ ವಿಷಯವನ್ನು ಕಡ್ಡಾಯವಾಗಿ ಒಂದು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು.<br><br>ಎಂ.ಬಿ.ಎ. ಅಥವಾ ಎಂ.ಕಾಂ. ಅಥವಾ ಎಂ.ಸಿ.ಎ. ಅಥವಾ ಗಣಿತ/ ಸಂಖ್ಯಾಶಾಸ್ತ್ರ/ ಅರ್ಥಶಾಸ್ತ್ರ/ ಬ್ಯಾಂಕಿಂಗ್/ ಅಂಕೌಂಟೆನ್ಸಿ ವಿಷಯಗಳೊಂದಿಗೆ ತೇರ್ಗಡೆಯಾಗಿ ಸ್ನಾತಕೋತ್ತರ ಪದವಿ ( ಮಾಸ್ಟರ್ ಡಿಗ್ರಿ ) ಹೊಂದಿದವರಿಗೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಆದ್ಯತೆ ನೀಡಲಾಗುವುದು. | ರೂ.27650-650-29600-750-32600-950-39800-1100-46400-1250-53900-1450-58250<br><br>ಹಾಗೂ ಕಾಲಕಾಲಕ್ಕೆ ಬ್ಯಾಂಕಿನ ಆಡಳಿತ ಮಂಡಳಿ ನಿಗದಿಪಡಿಸುವ ತುಟ್ಟಿಭತ್ಯೆ ಹಾಗೂ ಇತರ ಭತ್ಯೆಗಳು. |
| ಅಟೆಂಡರ್ / ಜವಾನ | 2 | ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. | ರೂ.19950-450-20400-500-22400-550-24600-600-27000-650-29600-750-32600-850-36000-950-37900<br>ಹಾಗೂ ಕಾಲಕಾಲಕ್ಕೆ ಬ್ಯಾಂಕಿನ ಆಡಳಿತ ಮಂಡಳಿ ನಿಗದಿಪಡಿಸುವ ತುಟ್ಟಿಭತ್ಯೆ ಹಾಗೂ ಇತರ ಭತ್ಯೆಗಳು. |

**ನಿಬಂಧನೆಗಳು** :

1. **ಅ) ಕಿರಿಯ ಸಹಾಯಕರು/ ಜ್ಯೂನಿಯರ್ ಅಸಿಸ್ಟಂಟ್ ಹುದ್ದೆಗೆ ಅರ್ಜಿ ಸಲ್ಲಿಸುವ** ಅಭ್ಯರ್ಥಿಗಳು ಕನ್ನಡ ಹಾಗೂ ಇಂಗ್ಲೀಷ ಭಾಷೆಯಲ್ಲಿ ಓದುವ, ಬರೆಯುವ, ಮಾತನಾಡುವ, ಹಾಗೂ ವ್ಯವಹಾರದ ಜ್ಞಾನ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಕಂಪ್ಯೂಟರ್ ಶಿಕ್ಷಣ ಹೊಂದಿರಬೇಕು.

   **ಬ) ಅಟೆಂಡರ್/ ಜವಾನ ಹುದ್ದೆಗೆ ಅರ್ಜಿ ಸಲ್ಲಿಸುವ** ಅಭ್ಯರ್ಥಿಗಳು ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು.

2. **ಈ ಮೇಲ್ಕಾಣಿಸಿದ ಎಲ್ಲಾ ಹುದ್ದೆಗಳಿಗೆ ಅಭ್ಯರ್ಥಿಗಳ ವಯೋಮಿತಿ** : ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ18ವರ್ಷಗಳಾಗಿರ ಬೇಕು. ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳನ್ವಯ ಹಾಗೂ ಒಂದು ಬಾರಿಯ ಕ್ರಮವಾಗಿ , ಗರಿಷ್ಠ **ವಯೋಮಿತಿಯಲ್ಲಿ ಸಡಲಿಕೆ ನೀಡಿ ಕರ್ನಾಟಕ ಸರ್ಕಾರವು ಹೊರಡಿಸಿದ ಆದೇಶ ಸಂಖ್ಯೆ ಸಿಆಸುಇ /262/ಸೇನೆನಿ/2025 ಬೆಂಗಳೂರು, ದಿನಾಂಕ 29.01.2026 ರನ್ವಯ ಎಲ್ಲ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ 5 ವರ್ಷಗಳ ವಿನಾಯಿತಿಯನ್ನು ನೀಡಲಾಗಿದೆ**. ಈ ಕೆಳಕಂಡ ಗರಿಷ್ಠ ವಯೋಮಿತಿಗೊಳಪಟ್ಟಿರಬೇಕು.

   **1.** ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೆ ಹಿಂದುಳಿದ ವರ್ಗಗಳ ವರ್ಗ -1 ಕ್ಕೆ ಸೇರಿರುವ ಅಭ್ಯರ್ಥಿಗಳಿಗೆ - ಗರಿಷ್ಠ 45 ವರ್ಷಗಳು
   **2.** ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ (2ಎ,2ಬಿ,3ಎ,3ಬಿ – ಗರಿಷ್ಠ 43 ವರ್ಷಗಳು
   **3.** ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ - ಗರಿಷ್ಟ 40 ವರ್ಷಗಳು

3. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೆ ಹಿಂದುಳಿದ ವರ್ಗಗಳ ವರ್ಗ-1 ಕ್ಕೆ ಸೇರಿರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಹಾಗೂ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಜಾತಿ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಲಗತ್ತಿಸಬೇಕು.

   ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಈ ಮೇಲ್ಕಾಣಿಸಿದ ನೇಮಕಾತಿ ಪ್ರಕಟಣೆಯ ದಿನಾಂಕದ ನಂತರ ಪಡೆದಿರುವ ಪ್ರಮಾಣ ಪತ್ರವನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಕಡ್ಡಾಯವಾಗಿ ಲಗತ್ತಿಸಬೇಕು.

4. ಈ ಮೇಲ್ಕಾಣಸಿದ ಎಲ್ಲಾ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನ ನಡೆಸುವ ಮೂಲಕ ಆಯ್ಕೆ ಮಾಡಲಾಗುವುದು.

   **ಅ) ಕಿರಿಯ ಸಹಾಯಕರು/ ಜ್ಯೂನಿಯರ್ ಅಸಿಸ್ಟಂಟ್ ಹುದ್ದೆಗೆ ಅರ್ಜಿ ಸಲ್ಲಿಸುವ** ಅಭ್ಯರ್ಥಿಗಳಿಗೆ 200 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಈ ಪೈಕಿ ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಇಂಗ್ಲೀಷಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಕ್ಕೆ 50 ಅಂಕಗಳು ಮತ್ತು ಭಾರತ ಸಂವಿಧಾನಕ್ಕಾಗಿ 25

ಅಂಕಗಳು ಬ್ಯಾಂಕಿನ ಉದ್ದೇಶಗಳು ಮತ್ತು ಕಾರ್ಯಚಟುವಟಿಕೆಗಳಿಗೆ 25 ಅಂಕಗಳು = ಒಟ್ಟು 200 ಅಂಕಗಳಿಗೆ ಬಹು ಆಯ್ಕೆ ಮಾದರಿಯ( Objective type Multiple Choice ) ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

ಬ) **ಅಟೆಂಡರ್/ ಜವಾನ ಹುದ್ದೆಗೆ ಅರ್ಜಿ ಸಲ್ಲಿಸುವ** ಅಭ್ಯರ್ಥಿಗಳಿಗೆ 100 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಈ ಪೈಕಿ ಕನ್ನಡ ಭಾಷೆಯಾಗಿ 50 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 50 ಅಂಕಗಳು = ಒಟ್ಟು 100 ಅಂಕಗಳಿಗೆ ಬಹು ಆಯ್ಕೆ ಮಾದರಿಯ ( Objective type Multiple Choice )ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

ಮೇಲ್ಕಾಣಿಸಿದ ಎಲ್ಲಾ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಪಡೆಯುವ ಅಂಕಗಳನ್ನು ಶೇಕಡಾ 85 ಕ್ಕೆ ನಿಗದಿಪಡಿಸಿ, ಉಳಿದ ಪ್ರತಿಶತ 15 ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಮೌಖಿಕ ಸಂದರ್ಶನ ನಡೆಸಿ, ಆಯ್ಕೆ ಮಾಡಲಾಗುವುದು.

5. ಅರ್ಜಿಯನ್ನು ಸ್ವ-ಹಸ್ತಾಕ್ಷರದಲ್ಲಿ ಬರೆಯತಕ್ಕದ್ದು. ತಪ್ಪು ಹಾಗೂ ಅಪೂರ್ಣ ಮಾಹಿತಿ ನೀಡಿದ ಅರ್ಜಿಯನ್ನು ತಿರಸ್ಕರಿಸಲಾಗುವುದು.

6. ಎಸ್. ಎಸ್. ಎಲ್. ಸಿ / ಪಿ.ಯು.ಸಿ/ ಪದವಿ/ ಸ್ನಾತಕೋತ್ತರ ಪದವಿಯ ಎಲ್ಲಾ ವರ್ಷಗಳ / ಎಲ್ಲಾ ಸೆಮಿಸ್ಟರ್‌ಗಳ ಅಂಕಪಟ್ಟಿಯ ಸ್ವದೃಢೀಕೃತ ನಕಲು ಪ್ರತಿಯನ್ನು ಲಗತ್ತಿಸಬೇಕು.

7. ಅರ್ಜಿ ಶುಲ್ಕ : ರೂ.1000+ 18% ಜಿಎಸ್‌ಟಿ 180 ಒಟ್ಟು ರೂ.1180.00 ( ರೂಪಾಯಿ ಒಂದು ಸಾವಿರದಾ ಒಂದನೂರಾ ಎಂಬತ್ತು ಮಾತ್ರ) ಅರ್ಜಿ ಶುಲ್ಕವನ್ನು **ಮುಖ್ಯ ಕಾರ್ಯ ನಿರ್ವಾಹಕರು ಶ್ರೀ ಬಸವೇಶ್ವರ ಅರ್ಬನ ಕೋ-ಆಪ್‌ರೇಟಿವ್ ಬ್ಯಾಂಕ ಲಿ., ರಾಣೇಬೆನ್ನೂರು** ಹೆಸರಿಗೆ ಡಿಮಾಂಡ್ ಡ್ರಾಫ್ಟ್ ಮೂಲಕ ಪಾವತಿಸತಕ್ಕದ್ದು. ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ. ಈ ಮೇಲ್ಕಾಣಿಸಿದ ಎರಡೂ ಹುದ್ದೆಗಳಿಗೂ ಅರ್ಜಿ ಸಲ್ಲಿಸುವುದಿದ್ದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಶುಲ್ಕ ಪಾವತಿಸತಕ್ಕದ್ದು.

8. ಆಯ್ಕೆಯಾದ ಅಭ್ಯರ್ಥಿಗಳಿಗೆ ಕನಿಷ್ಟ ಒಂದು ವರ್ಷದ ವರೆಗೆ ತರಬೇತಿ ಅವಧಿ ( ಪ್ರೋಬೆಷನರಿ) ಇದ್ದು ಈ ಅವಧಿಯಲ್ಲಿ ವೇತನ ಶ್ರೇಣಿಯಲ್ಲಿನ ಕನಿಷ್ಟ ಮೂಲ ವೇತನ ಮಾತ್ರ ನೀಡಲಾಗುವುದು. ತರಬೇತಿ ಅವಧಿಯಲ್ಲಿ ಸೇವೆಯು ತೃಪ್ತಿಕರವಾಗದಿದ್ದಲ್ಲಿ ತರಬೇತಿ ಅವಧಿಯನ್ನು ವಿಸ್ತರಿಸುವ ಅಧಿಕಾರವು ಬ್ಯಾಂಕಿನ ಆಡಳಿತ ಮಂಡಳಿಗೆ ಇರುತ್ತದೆ.

9. ಬದಲಾದ ಕಾಯ್ದೆ ಮತ್ತು ನಿಯಮಗಳಿಗನುಗುಣವಾಗಿ ಹೆಚ್ಚಿನ ಷರತ್ತುಗಳನ್ನು ವಿಧಿಸುವ ಅಧಿಕಾರ ಬ್ಯಾಂಕಿನ ಸಿಬ್ಬಂದಿ ನೇಮಕಾತಿ ಸಮಿತಿಗೆ ಇರುತ್ತದೆ.

10. ಈ ಜಾಹೀರಾತನ್ನು ಬದಲಾಯಿಸುವ, ನೇಮಕಾತಿಯನ್ನು ಮುಂದೂಡುವ ಅಥವಾ ಅಗತ್ಯವಿದ್ದಲ್ಲಿ ರದ್ದು ಪಡಿಸುವ ಪೂರ್ಣ ಅಧಿಕಾರ ಆಡಳಿತ ಮಂಡಳಿಗೆ ಇರುತ್ತದೆ.

ಹಾಗೂ ಆಯ್ಕೆಯ ಬಗ್ಗೆ ಬ್ಯಾಂಕಿನ ಸಿಬ್ಬಂದಿ ನೇಮಕಾತಿ ಸಮಿತಿ ನಿರ್ಣಯ ಅಂತಿಮವಾಗಿರುತ್ತದೆ.

ಬ್ಯಾಂಕಿನ ಅಧಿಕೃತ ಜಾಲತಾಣ " www.shreebasaveshwarbank.in " ದ ಮೂಲಕ ಅರ್ಜಿ ಫಾರ್ಮಗಳನ್ನು ಡೌನಲೋಡ್ ಮಾಡಿಕೊಳ್ಳಬಹುದು. ಅರ್ಜಿ ನಮೂನೆಗಳನ್ನು ಭರ್ತಿಮಾಡಿ ಸೂಕ್ತ ದಾಖಲಾತಿಗಳನ್ನು ಸ್ವದೃಢೀಕೃತ ಪ್ರತಿಗಳೊಂದಿಗೆ ಅರ್ಜಿಯನ್ನು '' **ಮುಖ್ಯ ಕಾರ್ಯ ನಿರ್ವಾಹಕರು ಶ್ರೀ ಬಸವೇಶ್ವರ ಅರ್ಬನ ಕೋ-ಆಪ್‌ರೇಟಿವ್ ಬ್ಯಾಂಕ ಲಿ., ಎ.ಪಿ.ಎಂ.ಸಿ. ರಸ್ತೆ, ರಾಣೇಬೆನ್ನೂರು – 581 115, ಹಾವೇರಿ ಜಿಲ್ಲೆ** ಈ ವಿಳಾಸಕ್ಕೆ ಪ್ರಕಟಣೆಯ ದಿನಪತ್ರಿಕೆ ಜಾಹೀರಾತು ದಿನಾಂಕದಿಂದ 21 ದಿನಗಳೊಳಗಾಗಿ ತಲುಪುವಂತೆ ಸಲ್ಲಿಸತಕ್ಕದ್ದು. ಭರ್ತಿ ಮಾಡಿದ ಅರ್ಜಿಗಳನ್ನು ಬ್ಯಾಂಕಿನ ಕಛೇರಿಗೆ ದಿನಾಂಕ 31/08/2026 ರ ಸಾಯಂಕಾಲ 5:00 ಗಂಟೆಯೊಳಗೆ ತಲುಪುವಂತೆ ಕಳುಹಿಸತಕ್ಕದ್ದು. ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಸಾರ್ವತ್ರಿಕ ರಜೆ ದಿನವಾಗಿದ್ದರೆ, ಮುಂದಿನ ಕೆಲಸದ ದಿನವು ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿರುತ್ತದೆ. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಹಾಗೂ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಯ ಜೊತೆಗೆ " **Chief Executive Officer, Shree Basaveshwar Urban Co-operative Bank Ltd., Ranebennur** " ಹೆಸರಿಗೆ ತೆಗೆದ ರೂ.1180.00 ( ರೂಪಾಯಿ ಒಂದು ಸಾವಿರದಾ ಒಂದನೂರಾ ಎಂಬತ್ತು ಮಾತ್ರ) ರ ಡಿಮಾಂಡ್ ಡ್ರಾಫ್ಟ್ ಮೂಲಕ ಸಲ್ಲಿಸತಕ್ಕದ್ದು. ಒಂದೇ ಅಭ್ಯರ್ಥಿಯು ಈ ಮೇಲ್ಕಾಣಿಸಿದ ಎರಡೂ ಹುದ್ದೆಗಳಿಗೂ ಅರ್ಜಿ ಸಲ್ಲಿಸುವುದಿದ್ದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿಯನ್ನು, ಸೂಕ್ತ ಅರ್ಜಿ ಶುಲ್ಕದ ಜೊತೆಗೆ ಸಲ್ಲಿಸತಕ್ಕದ್ದು. ಹಾಗೂ ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸುತ್ತಿರೋ ಆ ಹುದ್ದೆಯನ್ನು ಅಂದರೆ '' **ಕಿರಿಯ ಸಹಾಯಕರು**/ **ಜ್ಯೂನಿಯರ್ ಅಸಿಸ್ಟಂಟ್ ಹುದ್ದೆಗೆ ಅಥವಾ ಅಟೆಂಡರ್**/ **ಜವಾನ ಹುದ್ದೆಗೆ** ಅರ್ಜಿ ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು. ''

ಸ್ಥಳ : ರಾಣೇಬೆನ್ನೂರು

ದಿನಾಂಕ : 09/08/2026

ಸಿಬ್ಬಂದಿ ನೇಮಕಾತಿ ಸಮಿತಿ ಪರವಾಗಿ

ಸಹಿ/-

ಮುಖ್ಯಕಾರ್ಯನಿರ್ವಹಣಾಧಿಕಾರಿ

ಶ್ರೀ ಬಸವೇಶ್ವರ ಅರ್ಬನ ಕೋ-ಆಫ್ ಬ್ಯಾಂಕ ಲಿ.,

ರಾಣೇಬೆನ್ನೂರು, ಹಾವೇರಿ ಜಿಲ್ಲೆ